ಭಾನುವಾರ
25/05/2025

ಬದುಕು ಪುರಾಣ



ನಾ ಕಾರಂತ ಪೆರಾಜೆ

THE RURAL MIRROR.com Constructive Media
WWW.THERURALMIRROR.COM
ದ ರೂರಲ್ ಮಿರರ್.ಕಾಂ
Constructive Media

# ಎಲ್ಲರೊಳಗೂ ಏಕಲವ್ಯನಿದ್ದಾನೆ!

'ಏಕಲವ್ಯ ಪ್ರತಿಭೆ' – ಎರಡು ಪದಗಳು ಹೊಸೆದ ಪದಗುಚ್ಛ. ಅದರೊಳಗೆ ಸಾಧನೆಗಳ ಜೀವದ್ರವ ತುಂಬಿದೆ. ಬದುಕನ್ನು ಕಟ್ಟಿಕೊಳ್ಳಲು ಬೇಕಾದ ಕಾಂತತ್ವದ ತರಂಗಗಳಿವೆ. ಕನಸುಗಳನ್ನು ನನಸು ಮಾಡಬಲ್ಲ ಶಕ್ತಿಯಿವೆ. ಭವಿಷ್ಯದ ಲೆಕ್ಕಣಿಕೆಯಿದೆ. ಬೌದ್ಧಿಕ ಸಾಮರ್ಥ್ಯಗಳ ರಸಘಟ್ಟಿಗಳಿವೆ. ಇದು ಉತ್ಪ್ರೇಕ್ಷೆಯಲ್ಲ. ಸಾಧನೆಯಿಲ್ಲದೆ ಬದುಕನ್ನು ಕಟ್ಟಿಕೊಳ್ಳಲು ಹೇಗೆ ಸಾಧ್ಯ. ಸಾಧನೆಯ ಹಾದಿ ಎಲ್ಲರದೂ ಒಂದೇ ಅಲ್ಲ.

'ಏಕಲವ್ಯ ಪ್ರತಿಭೆ' – ವೇದಿಕೆಯ ಭಾಷಣಗಳಲ್ಲಿ, ಪರಿಚಯ ಲೇಖನಗಳಲ್ಲಿ, ಅಭಿನಂದನಾ ನುಡಿಗಳಲ್ಲಿ, ಪತ್ರಿಕೆ ವರದಿಗಳಲ್ಲಿ ಇಣುಕುವ ಪದಗಳು. ಅವು ಯಾಕೆ ಇಣುಕುತ್ತವೆ? ಸಾಧನೆ ಮಾಡಿದವರನ್ನು ಉಲ್ಲೇಖಿಸುವಾಗ ಪರ್ಯಾಯ ಪದವಾಗಿ, ಗೌರವ ಸೂಚಕ ಪದವಾಗಿ ಬಳಕೆಯಾದಾಗ ಖುಷಿಯಿಂದ ಇಣುಕುತ್ತವೆ!

'ಏಕಲವ್ಯ ಪ್ರತಿಭೆ' ಏನಿದು? ಆತ ಏಕಪಾಠಿ. ಸ್ವ-ಪರಿಶ್ರಮ, ಕ್ಷಿಪ್ರ ಗ್ರಹಿಕೆ, ಓದುವಿಕೆ, ನೆನಪು ಶಕ್ತಿ, ಜತೆಗೆ ಛಲ. ಈ ಒಳಸುರಿಗಳ ಮೂಲಕ ಆತನ 'ಸಾಧನೆ' ಸಾಕಾರವಾಗುತ್ತದೆ. ಸಾಧಕನ ಸೃಷ್ಟಿಯಾಗುತ್ತದೆ. ವಿದ್ಯೆಯನ್ನು ಗುರುಮುಖೇನ ಕಲಿಯುವುದು ಪದ್ಧತಿ. ಹೀಗೆ ಕಲಿಯುವ ಶಾಸ್ತ್ರೀಯ ಕಲಿಕೆಯಲ್ಲಿ ಪೂರ್ಣತೆಯಿದೆ. ಗುರುಕುಲಗಳು ವಿದ್ಯಾರ್ಥಿಯ ವಿದ್ಯಾಪೂರ್ಣತೆಯನ್ನು ಪೂರೈಸುತ್ತವೆ. ಈ ಕಾಲಘಟ್ಟದಲ್ಲಿ ಗುರುಕುಲಗಳು ಅಪರೂಪ. ಶಾಲಾ ಕಾಲೇಜುಗಳ ಅಧ್ಯಾಪಕರು/ ಉಪನ್ಯಾಸಕರು 'ಗುರು'ವಾಗಿ ಒದಗಿದ್ದಾರೆ. ಅವರೊಂದಿಗೆ ಕಲಿತ ವಿದ್ಯೆಗೆ ಪೂರ್ಣತೆಯಿದೆ.

ಅಪರೂಪಕ್ಕೆ ಅಲ್ಲೋ ಇಲ್ಲೋ ಜನ್ಮದತ್ತವಾಗಿ 'ಕ್ಷಿಪ್ರ ಪ್ರತಿಭೆ'ಗಳು ರೂಪುಗೊಂಡಿರುತ್ತಾರೆ. ಅವರು ಯಾವುದೇ ಕ್ಷೇತ್ರವನ್ನು ಪ್ರವೇಶಿಸಲಿ, ಕ್ಷಿಪ್ರವಾಗಿ ಆರ್ಜಿಸಿಕೊಳ್ಳುವ ಸಾಮರ್ಥ್ಯವನ್ನು ಹೊಂದಿರುತ್ತಾರೆ. ವಿದ್ಯಾರ್ಥಿಗಳಿಗೆ ಗುರುಗಳು ಪಾಠ ಮಾಡುವುದನ್ನು ನೋಡಿ, ಕೇಳಿ ಕಲಿತವರಿದ್ದಾರೆ. ನಾಟ್ಯದ ಹೆಜ್ಜೆಗಾರಿಕೆಯನ್ನು ನೋಡಿ, ತಿಳಿದವರಿದ್ದಾರೆ. ಇವರಿಗೆ ಕಲೆಯೇ ಗುರು. ಅರಿವೇ ಮೇರು. ಇಂತಹ ಪ್ರತಿಭೆಗಳನ್ನು 'ಏಕಲವ್ಯ ಪ್ರತಿಭೆ' ಎನ್ನುತ್ತೇವೆ. ಅಂದರೆ ಸ್ವಯಾರ್ಜಿತವಾಗಿ ಮೇಲೆದ್ದು ಬಂದವರು. ಎಲ್ಲರೂ ಏಕಲವ್ಯರಾಗಲು ಸಾಧ್ಯವಿಲ್ಲ. ಅದು ಯೋಗ, ಯೋಗ್ಯತೆಗಳ ಮಿಳಿತ.

'ಮೂವತ್ತು ದಿವಸಗಳಲ್ಲಿ ಇಂಗ್ಲಿಷ್ ಭಾಷೆ ಕಲಿಯಿರಿ' – ಸೊಗಸಾದ ಪದಪುಂಜಗಳ ವಾಕ್ಯ. 'ಮೂವತ್ತೇ ದಿವಸದಲ್ಲಿ ಇಂಗ್ಲಿಷ್ ಮಾತನಾಡಿ. ಇಲ್ಲವೆಂದಾದರೆ ಪುಸ್ತಕದ ಹಣ ವಾಪಾಸ್' – ಜಾಹೀರಾತುಗಳ ಮೋಡಿ ನೋಡಿ. ಬೆಲೆ ನೋಡದೆ ಪುಸ್ತಕ ಖರೀದಿಸುತ್ತೇವೆ. ಪುಸ್ತಕ ಬದುಕಿನ ಸ್ನೇಹಿತ ಹೌದು. ವಿಚಾರಗಳ ಗ್ರಹಿಕೆಗಳಿಗೆ ಪುಸ್ತಕಗಳು ಉಪಾಧಿ. ಆದರೆ ಭಾಷೆಯ ಪರಿಚಯಕ್ಕೆ ಪುಸ್ತಕಗಳು ಕೈತಾಂಗು ಆದಾವಷ್ಟೇ. ಸಾಧಕನು ಕಷ್ಟಪಟ್ಟು ಛಲದಿಂದ ಪುಸ್ತಕವನ್ನೋದಿ ಬರೆಯಲು ಕಲಿಯಬಹುದು. ಮಾತನಾಡಬೇಕಾದರೆ ಭಾಷೆಯನ್ನು ಬಲ್ಲ ಜನರ ಮಧ್ಯೆ ಬೆರೆಯಬೇಕು.



ಈಗ ನವಮಾಧ್ಯಮಗಳ ಯುಗ. ಜಾಲತಾಣಗಳನ್ನು ಜಾಲಾಡಿದರೆ ನಂನಮ್ಮ ಆಸಕ್ತಿಗೆ ಬೇಕಾದಷ್ಟು ಕಲಿಕಾ ಟೂಲ್ಸ್ ಗಳು ಸಿಗುತ್ತವೆ. ಸಿದ್ಧ ಮಾದರಿಯ ಅವುಗಳಿಗೆ 'ಗುರು'ವಿನ ಸ್ಥಾನ. ಈ ಜಾಡಿನಲ್ಲಿ ಕಲಿಕೆಯು ಮುಂದುವರಿದರೆ ಮೇಲ್ನೋಟದ ಸ್ಪರ್ಶವನ್ನಷ್ಟೇ ನೇವರಿಸಿದಂತಾಗುತ್ತದೆ. ಕಲಿಯಬೇಕೆನ್ನುವ ಸಾಧಕನಿಗೆ ಇದು ಮೊದಲ ಮೆಟ್ಟಿಲು. ಅಪರೂಪದಲ್ಲಿ ಪರಿಶ್ರಮವಹಿಸಿ ಸಾಧಿಸಿದವರು ಯಶಸ್ಸಿನ ಮೆಟ್ಟಲನ್ನು ಏರುತ್ತಾರೆ.

ಕನ್ನಾಡಿನ ಅನ್ಯಾನ್ಯ ವಿಶ್ವವಿದ್ಯಾನಿಲಯಗಳು ಅಂಚೆ ತೆರಪಿನ ಶಿಕ್ಷಣವನ್ನು ನಡೆಸುತ್ತಿದೆ. ಅಲ್ಲಿ ಕಲಿತು ಪದವೀಧರರಾಗುತ್ತಾರೆ. ವಿಶ್ವವಿದ್ಯಾಲಯಗಳು ನೀಡಿದ ಪಠ್ಯವನ್ನೋದಿ ರ್ಯಾಂಕ್ ಪಡೆಯುತ್ತಾರೆ. ಚಿನ್ನದ ಪದಕ ಗೆಲ್ಲುತ್ತಾರೆ. ಇದಕ್ಕಾಗಿ ವಯಸ್ಸಿನ ಹಂಗಿಲ್ಲದ ವಿಶೇಷ ತರಬೇತಿಯನ್ನೂ ಪಡೆಯುತ್ತಾರೆ. ಇವೆಲ್ಲವೂ ಏಕಪಾಠಿಗೆ ಸಲೀಸು. ಹಿಂದೆ ಓದಿದ ಸಂಗತಿಗಳು ನೆನಪಿನ ಕೋಶದಲ್ಲಿರುತ್ತವೆ. ಕ್ಷಿಪ್ರಗ್ರಹಿಕೆಗಳಿಂದ ಪಠ್ಯಗಳು ಸುಲಭಸಾಧ್ಯವಾಗಿ ಪರೀಕ್ಷೆಯನ್ನು ಹತ್ತಿಯಷ್ಟು ಹಗುರವಾಗಿ ಸ್ವೀಕರಿಸುತ್ತಾರೆ. ಇದು 'ಏಕಲವ್ಯ ಪ್ರತಿಭೆ'ಗಳ ತಾಕತ್ತು.

ಪತ್ರಿಕೆಗಳಲ್ಲಿ ಪ್ರಕಟವಾಗುವ ಸಾಧಕರ ಲೇಖನಗಳಲ್ಲಿ 'ಇವರು ಏಕಲವ್ಯ ಪ್ರತಿಭೆ'ಯೆಂದು ಪರಿಚಯಿಸುತ್ತಾರೆ. ಶೈಕ್ಷಣಿಕ ಕಲಿಕೆಯ ಹೊರತಾದ ಕಲೆ, ಸಾಹಿತ್ಯ, ಕ್ರೀಡೆಗಳಲ್ಲಿ ಸ್ವ-ಆಸಕ್ತಿಯಿಂದ ತೊಡಗಿಸಿಕೊಂಡು ಸಾಧನೆ ಮಾಡುತ್ತಾರೆ. ಸಂತೋಷಕ್ಕಾಗಿ ಆರಂಭವಾದ ಅಭ್ಯಾಸಗಳು, ನಿಧಾನಕ್ಕೆ ಪ್ರವೃತ್ತಿಯಾಗಿ, ಮತ್ತೆ ವೃತ್ತಿಯಾಗಿ ಬದಲಾಗುತ್ತದೆ. ಹಿರಿಯರೊಂದಿಗೆ ಬೆರೆತು, ಅನುಭವಿಗಳಿಂದ ಕೇಳಿ, ತಿಳಿದು ಕಲಿಯುವ ಜ್ಞಾನವಂತ ನಿಜವಾದ ಏಕಲವ್ಯ ಸಾಧಕ.

ಕ್ರೀಡಾ ಕ್ಷೇತ್ರದಲ್ಲಿ ಸಾಧಕರ ಸಂಖ್ಯೆ ಗಣನೀಯ ಮತ್ತು ಗಮನೀಯ. ಎಷ್ಟೋ ಸಲ ಪ್ರೋತ್ಸಾಹದ ಕೊರತೆಯಿಂದ ಪ್ರತಿಭೆ ಮುದುಡಿರುತ್ತದೆ. ಶಾಲೆ, ಕಾಲೇಜು, ಸರಕಾರಗಳ ಬೆಂಬಲವಿದ್ದರೆ ರಾಷ್ಟ್ರ ಯಾಕೆ, ಅಂತಾರಾಷ್ಟ್ರೀಯ ಮಟ್ಟದಲ್ಲೂ ಮಿಂಚುವ, ಮಿಂಚಿದ ಕ್ರೀಡಾಳುಗಳಿಲ್ವಾ. ಸಾಧನೆ ಮಾಡಿದವರಿಲ್ವಾ. ಏಕಲವ್ಯನಂತೆ ಕಲಿಯುವ ಛಲಕ್ಕೆ ಬೆಂಬಲಗಳು ಸಾಥ್ ಆದರೆ ಗುರಿ ಮುಟ್ಟಲು ಹತ್ತು ಹೆಜ್ಜೆ.

ಸುಮಾರು 1988-90ರ ಕಾಲಘಟ್ಟ. ಧ್ವನಿಸುರುಳಿ ಲೋಕದಲ್ಲಿ 'ಸಂಗೀತಾ ಕಂಪನಿ'ಯು ಜನಮಾನ್ಯತೆಯನ್ನು ಪಡೆದಿತ್ತು. ಇವರ ತಯಾರಿಗಳು ಗುಣಮಟ್ಟದಲ್ಲಿ ಮೇಲ್ಮೆಯನ್ನು ಪಡೆದಿತ್ತು. ಈ ಕಂಪನಿಯು 'ಪಾದುಕಾ ಪ್ರದಾನ, ಮಾಗಧ ವಧೆ, ಸುಧನ್ವಾರ್ಜುನ' ಪ್ರಸಂಗಗಳ ಯಕ್ಷಗಾನ ತಾಳಮದ್ದಳೆಯ ಧ್ವನಿಸುರುಳಿಯನ್ನು ನಿರ್ಮಿಸಿತ್ತು.

**ಸಂಪೂರ್ಣ ಓದಿಗೆ....**
**www.theruralmirror.com ಕ್ಲಿಕ್ ಮಾಡಿರಿ ಅಥವಾ ಇಲ್ಲಿ Scan ಮಾಡಿರಿ**

ನಮ್ಮ ಚಾನೆಲ್ ಫಾಲೋ ಮಾಡಲು